ಪ್ರಥಮ ದರ್ಜೆ ನ್ಯಾಯಿಕಾಧಿಕಾರಿಗಳ ನ್ಯಾಯಾಲಯ, ಗೌರಿಬಿದನೂರು

ಸಿ ಸಿ ನಂ.**774/2019**

ದಿಃ **10-08-2026** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

| | | | |
|---|---|---|---|
| ಹೆಸರು | ಸುಧಾ | ಸಿ.ಡಬ್ಲ್ಯೂ | **04** |
| ವಯಸ್ಸು | 64 ವರ್ಷ | ಪಿ.ಡಬ್ಲ್ಯು: | **04** |
| ತಂದೆಯ / ಗಂಡನ ಹೆಸರು | ಅಶ್ವಥಪ್ಪ | | |
| ವೃತ್ತಿ | ನಿವೃತ್ತ ಎಫ್.ಡಿ.ಸಿ | | |
| ವಾಸಸ್ಥಳ | ಬೆಂಗಳೂರು | | |

ಮುಖ್ಯ ವಿಚಾರಣೆಃಃ ಶ್ರೀ ಸರ್ಕಾರಿ ಅಭಿಯೋಜಕರಿಂದಃ

ನಾನು ಗೌರಿಬಿದನೂರಿನ ತಾಲ್ಲೂಕು ಕಚೇರಿಯಲ್ಲಿ ಎಫ್.ಡಿ.ಸಿ ಆಗಿ 2020 ರವರೆಗೆ ಕರ್ತವ್ಯ ನಿರ್ವಹಿಸಿರುತ್ತೇನೆ.

ಮಾದನಹಳ್ಳಿ ಗ್ರಾಮದಲ್ಲಿರುವ ಸರ್ವೆ ನಂಬರ್ 185 ರಲ್ಲಿ ಕ್ಷೇತ್ರ 31 ಗುಂಟೆ ಜಮೀನು ಮೊದಲಿಗೆ ತಿಮ್ಮಪ್ಪ ಜಕ್ಕೋನಹಳ್ಳಿ ರವರ ಹೆಸರಿನಲ್ಲಿ ಇತ್ತು. ನಂತರ ಐ.ಎಲ್.ಆರ್ ಮತ್ತು ಆರ್ .ಆರ್ 402 ರಂತೆ ದರಖಾಸ್ತು ಮೂಲಕ ತಿಮ್ಮಪ್ಪ ಬಿನ್ ಹನುಮಂತಪ್ಪ ರವರ ಹೆಸರಿಗೆ ನಮೂದಾಯಿತು. ನಂತರ ಆರ್.ಆರ್ 699 ರಂತೆ ಚಿನ್ನಪ್ಪ ಬಿನ್ ಹನುಮಂತಯ್ಯುಸಿಸಿ, ಕುಂಟಪ್ಪ, ಗಂಗಪ್ಪ ಬಿನ್ ತಿಮ್ಮಪ್ಪ ರವರಿಂದ ರಾಮಾಯಣದ ಮುದ್ದಪ್ಪ ರವರಿಗೆ ಕೋರ್ಟ್ ಆದೇಶದಂತೆ ನಮೂದಾಗಿರುತ್ತದೆ. ನಂತರ ಆರ್.ಆರ್ 1156 ರಂತೆ ಸದರಿ ಮುದುಗಂಗಪ್ಪ ರವರ ಹೆಸರಿಗೆ ಖಾತೆ ಬದಲಾವಣೆ ಆಗಿರುತ್ತದೆ. ನಂತರ ಆರ್.ಆರ್ 2429 ರಂತೆ ಆರ್.ಗೋವಿಂದಪ್ಪ ರವರ ಹೆಸರಿಗೆ ವಿಭಾಗದ ಮೂಲಕ ಖಾತೆ ಬದಲಾವಣೆ ಆಗಿರುತ್ತದೆ. ನಂತರ ನೋಂದಣಿ ಕ್ರಯ ಪತ್ರದಂತೆ ಗೌರಿಬಿದನೂರು ಟೌನ್ ಮುನ್ಸಿಪಲ್ ಪ್ರೆಸಿಡೆಂಟ್ ರವರಿಗೆ ಆರ್. ಗೋವಿಂದಪ್ಪ ರವರು ಎ.ಕೆ ಸ್ಮಶಾನಕ್ಕೆಂದು ಬರೆದುಕೊಟ್ಟಿರುತ್ತಾರೆ. 1965 ರಿಂದ

1987 ರವರೆಗೆ ಸರ್ವೆ ನಂಬರ್ 185 ರ ಪಹಣಿಯಲ್ಲಿ ಆರ್. ಮುಂದ್ದುರಂಗಪ್ಪ ರವರ ಹೆಸರು ದಾಖಲಾಗಿರುತ್ತದೆ. ನಂತರ 1987-88 ರಿಂದ 2001 ರವರೆಗೆ ಆರ್. ಗೋವಿಂದಪ್ಪ ರವರ ಹೆಸರು ನಮೂದಾಗಿರುತ್ತದೆ. 2002-03 ರಲ್ಲಿ ಕೆ. ಗೋವಿಂದಪ್ಪ ರವರ ಹೆಸರು ಯಾವುದೇ ಮೂಲ ದಾಖಲಾತಿಗಳು ಇಲ್ಲದೆ ತಪ್ಪಾಗಿ ನಮೂದಗಿರುತ್ತದೆ. ದಿನಾಂಕ 12-06-2008 ರ ಕ್ರಯ ಪತ್ರದ ಆಧಾರದ ಮೇಲೆ ಸಿ.ಆರ್ ನರಸಿಂಹಮೂರ್ತಿ ರವರ ಹೆಸರು ಎಂ.ಆರ್ ನಂಬರ್ 17/2008-09 ರಂತೆ ಖಾತೆ ಆಗಿರುತ್ತದೆ. ದಿನಾಂಕ 26-09-2008 ರ ಕ್ರಯ ಪತ್ರದಂತೆ ಎನ್.ಎಂ ರವಿನಾರಾಯಣ ರೆಡ್ಡಿ ರವರಿಗೆ ಕ್ರಯವಾಗಿದ್ದು, ಅದರಂತೆ ಎಂ.ಆರ್ ನಂಬರ್ 38/2008-09 ರಂತೆ ಖಾತೆ ಆಗಿರುತ್ತದೆ. ನಂತರ 2011-12 ರಲ್ಲಿ ಸಾರ್ವಜನಿಕರ ಹಿತದೃಷ್ಟಿಯಿಂದ ಎನ್.ಎಂ ರವಿನಾರಾಯಣ ರೆಡ್ಡಿ ರವರು ಗೌರಿಬಿದನೂರು ಟೌನ್ ಪುರಸಭೆ ಮುಖ್ಯಾಧಿಕಾರಿಗಳಿಗೆ ಸರ್ವೆ ನಂಬರ್ 185 ರ ಆಸ್ತಿಯನ್ನು ದಾನ ಮಾಡಿರುತ್ತಾರೆ. ಅದರಂತೆ ಎಂ.ಎನ್.ಹೆಚ್ ನಂಬರ್ 20/2011-12 ರಂತೆ ಮುಖ್ಯಾಧಿಕಾರಿಗಳ ಹೆಸರಿಗೆ ಖಾತೆ ಆಗಿರುತ್ತದೆ. ಸಾಕ್ಷಿಗೆ ನಿಪಿ-3 ರಿಂದ 17 ಮತ್ತು 21 ರಿಂದ 27 ರ ದಾಖಲೆಗಳನ್ನು ತೋರಿಸಲಾಗಿ ಅವುಗಳನ್ನು ನೋಡಿ ಗುರುತಿಸಿದರು. ಸದರಿ ದಾಖಲೆಗಳ ವಿವವರಣೆಯನ್ನು ನೀಡುವಂತೆ ತನಿಖಾಧಿಕಾರಿಗಳು ಕೇಳಿದ ಮೇರೆಗೆ ನಾನು ಕೊಟ್ಟಿರುತ್ತೇನೆ. ಸದರಿ ವಿಚಾರವಾಗಿ ಹೇಳಿಕೆಯನ್ನು ಕೊಟ್ಟಿದ್ದೇನೆ.

<u>ಪಾಟೀ ಸವಾಲುಃ **2** ರಿಂದ **7** ನೇ ಆಪಾದಿತರ ಪರ ಶ್ರೀ ಆರ್**.**ಆರ್ ವಕೀಲರಿಂದ</u>

ಕೇತುವಾರು ದಾಖಲೆಗಳ ಆಧಾರದ ಮೇಲೆ ಪಹಣಿಗಳಲ್ಲಿ ಹೆಸರುಗಳು ನಮೂದಾಗಿದೆ. ಪಹಣಿಗಳಲ್ಲಿ ಹೆಸರುಗಳನ್ನು ನಮೂದಿಸುವ ವಿಚಾರವು ಗ್ರಾಮ ಲೆಕ್ಕಾಧಿಕಾರಿಗಳಿಗೆ ಮತ್ತು ಇತರೆ ಅಧಿಕಾರಿಗಳಿಗೆ ಸಂಬಂಧಿಸಿರುತ್ತದೆ. ಕಂದಾಯ

ಅಧಿಕಾರಿಗಳನ್ನು ಹೊರತುಪಡಿಸಿ ಬೇರೆ ಇಲಾಖೆಯವರು ಪಹಣಿಗಳಲ್ಲಿ ಮಾಹಿತಿಯನ್ನು ನಮೂದಿಸಲು ಆಗುವುದಿಲ್ಲ. ಪ್ರಸ್ತುತ ಸರ್ವೆ ನಂಬರ್ 185 ರ ಪಹಣಿ ಯಾರ ಹೆಸರಿನಲ್ಲಿ ಬರುತ್ತಿದೆ ಎಂದು ಗೊತ್ತಿಲ್ಲ. ದೂರವಾಣಿ ಮುಖಾಂತರ ಪೋಲೀಸರು ದಾಖಲೆಗಳನ್ನು ಸಲ್ಲಿಸುವಂತೆ ಕೇಳಿದ್ದರು. ಕಚೇರಿಯಲ್ಲಿ ಲಭ್ಯವಿರುವ ದಾಖಲೆಗಳನ್ನು ನಾನು ಪೋಲೀಸರಿಗೆ ಕೊಟ್ಟಿದ್ದೇನೆ ವಿನಃ ಸದರಿ ದಾಖಲೆಗಳಲ್ಲಿರುವ ಅಂಶಗಳು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ದಾನ ಪತ್ರದ ಮುಖಾಂತರ ಮುನ್ಸಿಪಲ್ ರವರಿಗೆ ಆಗಿದೆ ಎಂದು ನುಡಿಯುತ್ತಾರೆ. ದಾನ ಪತ್ರವನ್ನು ಹಾಜರುಪಡಿಸಿರುವ ಬಗ್ಗೆ ಗೊತ್ತಿಲ್ಲ. 2011 ರಿಂದ ಸರ್ವೆ ನಂಬರ್ 185 ರ ಕಂದಾಯ ದಾಖಲೆಗಳು ಪುರಸಭೆಯ ಮುಖ್ಯಾಧಿಕಾರಿಗಳ ಹೆಸರನಲ್ಲಿ ಬರುತ್ತಿದೆ ಎಂದರೆ ಗೊತ್ತಿಲ್ಲ. ಕಂದಾಯ ದಾಖಲೆಗಳನ್ನು 3 ನೇ ವ್ಯಕ್ತಿ ತಿದ್ದಲು ಅವಕಾಶ ಇಲ್ಲ. ನಾನು 1997 ರಲ್ಲಿ ಕರ್ತವ್ಯಕ್ಕೆ ಸೇರಿಕೊಂಡೆ. 1987-88 ರಿಂದ 2000-01 ರವರೆಗೆ ಪಹಣಿಯಲ್ಲಿ ಆರ್. ಗೋವಿಂದಪ್ಪ ರವರ ಹೆಸರನ್ನು ವಿಭಾಗದಂತೆ ಎಂ.ಆರ್ ನಂಬರ್ 22-10/1386 ರಂತೆ ಪಹಣಿಯಲ್ಲಿ ದಾಖಲು ಮಾಡಲು ಆಪಾದಿತರ ಪಾತ್ರ ಇಲ್ಲ ಎಂದರೆ ಗೊತ್ತಿಲ್ಲ.

ಮರುವಿಚಾರಣೆ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು).

ಓ.ಹೇ.ಕೇ.ಸ. ಇದೆ

ಸಹಿ/-
ಪ್ರ.ಸಿ.ನ್ಯಾ ಮತ್ತು ಜೆಎಂಎಫ್‌ಸಿ,
ಗೌರಿಬಿದನೂರು